# ಕಾರು ಗೋಪುರ!

ಭಾರತದಲ್ಲಿ ಕಾರುಗಳು ಕೆಟ್ಟು ಹೋದರೆ ಸಾಧ್ಯವಿರುವಷ್ಟು ಸಮಯ ದುರಸ್ತಿ ಮಾಡಿ ಹೇಗಾದರೂ ಉಪಯೋಗಿಸುತ್ತೇವೆ. ಕಡೆಗೂ ಅದು ಕೆಲಸಕ್ಕೆ ಬರುವುದಿಲ್ಲವೆಂದು ಖಚಿತವಾದ ಮೇಲೆ ಗುಜರಿಗೆ ಕೊಟ್ಟು ಕೈ ತೊಳೆದುಕೊಳ್ಳುತ್ತೇವೆ. ಆದರೆ ಚೀನಾದಲ್ಲಿ 'ಕಾರುಗಳನ್ನು ಉಪಯೋಗಿಸು; ಹಾಳಾದರೆ ಮೂಲೆಗೆ ಎಸೆ' ಎಂಬ ತತ್ವದಲ್ಲಿಯೇ ಉಪಕರಣಗಳು ತಯಾರಾಗುತ್ತವೆ. ಹೀಗಾಗಿ ಇಲ್ಲಿ ಕೆಟ್ಟುಹೋದ ಕಾರುಗಳನ್ನು ಮರುಬಳಕೆ ಮಾಡುವುದು ಕಡಿಮೆ. ಬಳಕೆಯಾಗದ ಕಾರುಗಳದ್ದೂ ಅಲ್ಲಿ ಸಮಸ್ಯೆಯಾಗುತ್ತಿದೆ.

ಮೂಲೆ ಸೇರಿ ತುಕ್ಕು ಹಿಡಿದುಕೊಂಡಿದ್ದ ಕಾರುಗಳಿಂದಲೇ ಕಲಾತ್ಮಕವಾಗಿ ಒಂದು ಸುಂದರವಾದ ಗೋಪುರವನ್ನು ಯಾಕೆ ಮಾಡಬಾರದು? ಹೀಗೆ ಯೋಚಿಸಿ ಚೀನಾದೇಶ ಅದನ್ನು ನಿರ್ಮಿಸಿ ತೋರಿಸಿದೆ. ಪುಟ್ಟದಾದ ಝೆಂಗ್ಝು ನಗರದ ಹುಬೈ ಕೃಷಿ ಕೈಗಾರಿಕಾ ಕೇಂದ್ರದ ಮುಂದೆ ಕಾರು ಗೋಪುರ ನಿರ್ಮಾಣವಾಗಿದೆ. ಇದನ್ನು ಮಾಡಿದವರು ಚೀನಾದ ತಂತ್ರಜ್ಞರೇ. ಬೇರೆ ಬೇರೆ ಬಣ್ಣದ ಒಂದೇ ಅಳತೆಯ ಕೆಟ್ಟ ಕಾರುಗಳನ್ನು ಒಂದರ ಮೇಲೊಂದರಂತೆ ನಿಲ್ಲಿಸಿ ಮಾಡಿದ ಗೋಪುರ ಮುಗಿಲು ಮುಟ್ಟಿದೆ. ಹೀಗೆ ಇಟ್ಟಿಗೆಯಂತೆ ಪೇರಿಸಲಾಗಿರುವುದು ಹತ್ತು ಕಾರುಗಳನ್ನು ಮಾತ್ರ. ಗೋಪುರದ ತುತ್ತ ತುದಿಯಲ್ಲಿ ಎರಡು ಕಾರುಗಳು ಜೋಡಿಯಾಗಿ ಅಡ್ಡ ಭಂಗಿಯಲ್ಲಿ ನಿಂತಿವೆ. ಒಟ್ಟು ಹದಿನೈದು ಮೀಟರ್ ಎತ್ತರವಾಗಿದೆ ಕಾರು ಗೋಪುರ.

ಇದು ನಗರದ ಒಂದು ಪ್ರಮುಖ ಪ್ರವಾಸೀ ಆಕರ್ಷಣೆಯಾಗಿದೆ. ಬಂದವರು ವಿಸ್ಮಯದಿಂದ ಒಂದು ಸಲ ಗೋಪುರಕ್ಕೆ ಪ್ರದಕ್ಷಿಣೆ ಬರುತ್ತಾರೆ. ಅದರ ಬಳಿ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಾರೆ. ಈ ಪ್ರಯತ್ನಕ್ಕಾಗಿ ಚೀನಾ ಗಿನ್ನೆಸ್ ವಿಶ್ವ ದಾಖಲೆಯ ಮನ್ನಣೆಯನ್ನು 2013ರಲ್ಲಿ ಪಡೆದಿದೆ.

■ ಪ.ರಾಮಕೃಷ್ಣ ಶಾಸ್ತ್ರಿ

